
# KYC - ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ

ಆರ್ಥಿಕ ಸಾಕ್ಷರತಾ ಸಪ್ತಾಹ
ಜೂನ್ ೫-೯, ೨೦೧೭

KYC ಅಥವಾ ನಿಮ್ಮ ಗ್ರಾಹಕರ ಬಗ್ಗೆ ತಿಳಿದುಕೊಳ್ಳಿ – ಇದು ನಿಮ್ಮ ಬ್ಯಾಂಕ್ ಖಾತೆ ಯನ್ನು ತೆರೆಯಲು ಮತ್ತು ಉಪಯೋಗಿಸಲು ಅವಶ್ಯ, ಆದರೆ ಇದು ಸರಳವಾಗಿದೆ.




* ಬ್ಯಾಂಕ್ ಖಾತೆ ತೆರೆಯಲು ಒಂದು ಗುರುತಿನ ದಾಖಲೆ, ಒಂದು ವಿಳಾಸದ ದಾಖಲೆ ಮತ್ತು ಇತ್ತೀಚಿನ ಒಂದು ಭಾವಚಿತ್ರ ಇದ್ದರೆ ಸಾಕು.

>ನಿಮ್ಮ ಆಧಾರ ಕಾರ್ಡ್, ವಾಹನ ಚಾಲನಾಪತ್ರ, ಮತದಾರ ಚೀಟಿ, ಪಾಸ್ ಪೋರ್ಟ್ ಅಥವಾ NREGA ಕಾರ್ಡ್, ಇವುಗಳು ಗುರುತಿನ ಹಾಗೂ ವಿಳಾಸ, ಎರಡಕ್ಕೂ ದಾಖಲೆಯಾಗಬಲ್ಲವು.

>ಪಾನ್ ಕಾರ್ಡ್ – ಗುರುತಿನ ದಾಖಲೆ ಮಾತ್ರ ಆಗಬಲ್ಲದು.

* ನಿಮ್ಮ ಸದ್ಯದ ವಿಳಾಸವು ಬ್ಯಾಂಕಿನಲ್ಲಿ ದಾಖಲಾದ ವಿಳಾಸಕ್ಕಿಂತ ಬೇರೆಯಾಗಿದ್ದಲ್ಲಿ, ಒಂದು ಸಾಮಾನ್ಯ ಅರ್ಜಿಯ ಮೂಲಕ ಹೊಸ ವಿಳಾಸವನ್ನು ಬ್ಯಾಂಕಿಗೆ ತಿಳಿಸಬಹುದು.

>ಯಾವುದೇ ದಾಖಲೆಗಳಿಲ್ಲದಿದ್ದರೂ, ಉಳಿತಾಯದ ಸಣ್ಣ ಖಾತೆಯನ್ನು ಇತ್ತೀಚಿನ ಭಾವಚಿತ್ರವನ್ನು ಸಲ್ಲಿಸಿ ತೆರೆಯಬಹುದು.

>ಇಂತಹ ಖಾತೆಗಳಲ್ಲಿ ಒಂದು ವರ್ಷದಲ್ಲಿ ರೂ.೫೦,೦೦೦. ವರೆಗೆ ಶಿಲ್ಕು ತಿಂಗಳಿಗೆ ರೂ.೧೦,೦೦೦. ವರೆಗೆ ಹಿಂಪಡೆತ ಮತ್ತು ಒಟ್ಟು ಜಮೆ ರೂ.೧,೦೦,೦೦೦. ವರೆಗೆ ಇರಬಹುದು

>ನಿಮ್ಮ ಖಾತೆಯಿಂದ ಒದಗಬಹುದಾದ ನಷ್ಟದ ಸಾಧ್ಯತೆಯ ಆಧಾರದ ಮೇಲೆ, ಬ್ಯಾಂಕು ನಿಮ್ಮ KYC ವಿವರಗಳನ್ನು ೨, ೮ ಅಥವಾ ೧೦ ವರ್ಷಗಳಲ್ಲಿ ಪುನಃ ಧೃಢಿಕರಿಸಬಹುದು.

>ಈ ಬಗ್ಗೆ ಏನಾದರೂ ಅಸಮಾಧಾನವಿದ್ದರೆ ನಿಮ್ಮ ಬ್ಯಾಂಕಿಗೆ ದೂರು ಕೊಡಿ. ಸಮಾಧಾನವಾಗದಿದ್ದಲ್ಲಿ ರಿಸರ್ವ ಬ್ಯಾಂಕಿನ ಬ್ಯಾಂಕಿಂಗ್ ಲೋಕಪಾಲರಿಗೆ ದೂರು ಸಲ್ಲಿಸಿ. ವಿವರಗಳಿಗೆ: https://bankingombudsman.rbi.org.in ಅನ್ನು ಸಂಪರ್ಕಿಸಿ,

ಹೆಚ್ಚಿನ ವಿವರಗಳಿಗಾಗಿ
www.rbi.org.in/KYCFAQ

Design: Anupam Sharma01/17-04

ಆರ್ಥಿಕ ಸಾಕ್ಷರತೆ. ಅಭಿವೃದ್ಧಿಯತ್ತ ನಡಿಗೆ

KYC

ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ
ಭಾರತೀಯ ರಿಜರ್ವ್ ಬ್ಯಾಂಕ್
www.rbi.org.in